ಭಾರೀ ಮಳೆಗೆ ಮನೆಗಳಿಗೆ
ನುಗ್ಗಿದ ನೀರು..!!




ಹಲೋ..ನಮ್ಮ ಶಾಸಕರಲ್ವಾ....ಬನ್ನೀ..ಬನ್ನೀ
ನೀರು ಫುಲ್ ತುಂಬೈತೆ "ಬಾಗಿನಾ" ಅರ್ಪಿಸ್ಬೋದು..!!

ಚೆನ್ನಾಗಿ ಕುಡಿದು ರಸ್ತೆ ಬದಿಯಲ್ಲೊಬ್ಬ ಬಿದ್ದು, ಉರುಳಾಡುತ್ತಿದ್ದ. ಅಲ್ಲಿಗೆ ಬಂದ ಮತ್ತೊಬ್ಬ ಕುಡುಕ ಕನಿಕರದಿಂದ ಹೀಗೆ ಹೇಳಿದ...

**ಮತ್ತೊಬ್ಬ ಕುಡುಕ:** ಸ್ವಲ್ಪ ಎಚ್ಚರದಿಂದ ಕುಡಿಯಬೇಕಿತ್ತು ನೀನು.

**ಉರುಳಾಡುತ್ತಿದ್ದ ಕುಡುಕ:** ಎಚ್ಚರದಿಂದ ಕುಡಿದ ಮೇಲೆನೇ ಹೀಗಾಗಿದ್ದು.

ಏರ್‌ಪೋರ್ಟ್ ಮುಂದೆ ಭಿಕ್ಷಕರು ಭಿಕ್ಷೆ ಬೇಡುತ್ತಿದ್ದರು.

**ಭಿಕ್ಷುಕ:** ಈಗ ಬಂದ ಫ್ಲೈಟ್ ಎಲ್ಲಿಂದ ಬಂತು?

**ಮತ್ತೊಬ್ಬ ಭಿಕ್ಷುಕ:** (ಆಗಮನದ ಬಾಗಿಲಿಗೆ ಓಡಿ ಹೋಗಿ ಫ್ಲೈಟ್ ಎಲ್ಲಿಂದ ಬಂತು ಅಂತ ವಿಚಾರಿಸಿ ವಾಪಸ್ ಬಂದು) ಈ ಫ್ಲೈಟ್ ಲಂಡನ್‌ನಿಂದ ಬಂದಿದೆಯಂತೆ.

**ಭಿಕ್ಷುಕ:** (ಕುರುಡನಂತೆ ನಟಿಸುತ್ತಾ ಹೊರಬರುತ್ತಿದ್ದ ಪ್ರವಾಸಿಗರಿಗೆ ಕೇಳಿದ) ಗೀವ್ ಮಿ ಒನ್ ಪೌಂಡ್ ಪ್ಲೀಜ್

**ಕುಡುಕ 1:** ಮನುಷ್ಯ ಮತ್ತು ಪ್ರಾಣಿಗೆ ಇರುವ ವ್ಯತ್ಯಾಸವೇನು?

**ಕುಡುಕ 2:** ಮನುಷ್ಯ ಕೆಲವೊಂದು ಬಾರಿ ಪ್ರಾಣಿಯಂತಾಗುತ್ತಾನೆ. ಆದರೆ ಪ್ರಾಣಿ ಮನುಷ್ಯನಂತೆ ಆಗುವುದಿಲ್ಲ.

**ಕುಡುಕ 1:** ಅದು ಹೇಗೆ?

**ಕುಡುಕ 2:** ಕುಡಿದಾಗ ಮನುಷ್ಯ ಪ್ರಾಣಿಯಂತಾಗುತ್ತಾನೆ. ನೆಟ್ಟಗೆ ನಡೆಯಲಾರ, ಪ್ರಾಣಿ ಕುಡಿದಾಗ ಮನಿಷ್ಯನಂತೆ ನಡೆಯುವುದಿಲ್ಲ.

ಬಾರ್‌ನಲ್ಲಿ ಕುಡಿದ ಮಿತ್ರರಿಗೆ ಬಿಲ್ ನೋಡಿ ನಶೆ ಇಳಿದಂತಾಯಿತು. ಕಣ್ಣಗಲಿಸಿ ಬಿಲ್‌ನ ವಿವರವನ್ನು ನೋಡಿದರು. ಅದರಲ್ಲಿ ಹೀಗೆ ಬರೆದಿತ್ತು.

**ಐಟಂ 1:** ಮದ್ಯಪಾನದ ಬಾಬ್ತು 400 ರೂಪಾಯಿ.

**ಐಟಮ್ 2:** ಊಟದ ಬಾಬ್ತು 300 ರೂಪಾಯಿ.

**ಐಟಮ್ 3 :** ಐಸ್ ಮತ್ತು ವಾಟರ್ 700 ರೂಪಾಯಿ

ಮಿತ್ರರು ವೇಟರ್‌ನನ್ನು ಕರೆದು, 'ನಿಮ್ಮ ಬಾರ್‌ನಲ್ಲಿ ನೀರಿಗಿಂತ ಬಿಯರ‍್ರೇ ಕಡಿಮೆ ಇದ್ಯಲ್ಲಪ್ಪ' ಅಂತಂದು ಅಲ್ಲಿಂದ ಜಾಗ ಖಾಲಿ ಮಾಡಿದರು.



ಮೇಷ್ಟ್ರುಗಳಿಗೆ ರಜೆ ಕೊಡದ 'ಟೀಚರ್ಸ್ ಡೇ' ಎಂಥದ್ದು? ಅಪ್ಪಾ...?

ರೋಡಿನ ಪಕ್ಕದಲ್ಲೇ ಕುಡುಕನೊಬ್ಬ ಏನನ್ನೋ ಹುಡುಕುತ್ತಿದ್ದ. ಅದನ್ನು ನೋಡಿದ ಮತ್ತೊಬ್ಬ ಕುಡುಕ ಅಲ್ಲಿಗೆ ಬಂದು ಅವನೂ ಏನನ್ನೋ ಹುಡುಕಲಾರಂಭಿಸಿದ. ಇಬ್ಬರು ಹುಡುಕುತ್ತಿದ್ದುದನ್ನು ನೋಡಿ ಮೂರನೇ ಕುಡುಕನೂ ಹುಡುಕಲಾರಂಭಿಸಿದ. 'ಏನನ್ನು ಹುಡುಕುತ್ತಿದ್ದೀರಿ' ಎಂದು ಸ್ವಲ್ಪ ಹೊತ್ತಿನ ನಂತರ ಎರಡನೇ ಮತ್ತು ಮೂರನೇ ಕುಡುಕರು, ಮೊದಲನೇ ಕುಡುಕನನ್ನು ಕೇಳಿದರು. ಅದಕ್ಕೆ ಅವನು, 'ಕಳೆದುಹೋದ ನನ್ನ ಕನಸುಗಳನ್ನು ಹುಡುಕುತ್ತಿದ್ದೇನೆ' ಎಂದ!

ಜಾತಿಗಣತಿ...!!




ಮಮ್ಮಿ ಡ್ಯಾಡಿನಾ ಅವಾಗವಾಗ ನೀವು
"ಪಶುಜಾತಿ" ಅಂತಾ ಬೈತಿರ್ತಾಳೆ ಸಾರ್ ... !!

**ರೋಗಿ:** ಯಾಕೋ ಹುಷಾರಿಲ್ಲ ನೋಡಿ.

**ಡಾಕ್ಟರ್:** ಏನೂ ಆಗಿಲ್ಲ... ಹೊಟ್ಟೆ ತುಂಬಾ ಊಟ ಮಾಡಿ ನಂತರ ಈ ಮಾತ್ರೆ ಮತ್ತು ಟಾನಿಕ್ ತೆಗೆದುಕೊಳ್ಳಿ. ಎಲ್ಲ ಸರಿ ಹೋಗುತ್ತೆ.

**ರೋಗಿ:** ಸರ್ ಹೊಟ್ಟೆ ತುಂಬಾ ಊಟ ಮಾಡಿದ ಮೇಲೆ ಮಾತ್ರೆ ಟಾನಿಕ್‌ಗೆ ಜಾಗ ಎಲ್ಲಿರುತ್ತೆ?

**ರಾಜಕಾರಣಿ:** ಕಳೆದ ಬಾರಿಯ ಚುನಾವಣೆ ವೇಳೆ ಬೇರೆ ಅಲೆಯೊಂದಿತ್ತು. ಆ ಅಲೆಯಲ್ಲಿ ಕೊಚ್ಚಿಹೋದೆ. ಈ ಬಾರಿ ಕೊಚ್ಚಿ ಹೋಗದಂತೆ ನೀವು ನೋಡಿಕೊಳ್ಳಿ.

**ಜನರು:** ನೀವು ನಮ್ಮನ್ನು ನೋಟಿನ ಹೊಳೆಯಲ್ಲಿ ಮುಳುಗಿಸಿ, ನಾವು ನಿಮ್ಮನ್ನು ತೇಲುವಂತೆ ಮಾಡುತ್ತೇವೆ.

ಮದುವೆಯಲ್ಲಿ ವರನನ್ನು ಹುಡುಕುತ್ತಿದ್ದರು. ಕಿರಿಯರೊಬ್ಬರು ಹೀಗೆ ಕೇಳಿದರು.

**ಕಿರಿಯ:** ಎಲ್ಲಿ ಹೋಗಿದ್ದಾನೆ ವರ?

**ಹಿರಿಯ:** ಕಾಶಿಯಾತ್ರೆಗೆ ಹೋಗಿದ್ದಾನೆ?

**ಕಿರಿಯ:** ಮದುವೆಗೆ ಮುಂಚೆಯೇ ಕಾಶಿಯಾತ್ರೆಗೆ ಹೋಗಿದ್ದಾನೆಯೆ? ಬರುವುದ್ಯಾವಾಗ ಮುಹೂರ್ತ ಮುಗಿದ ಮೇಲೆನಾ?

**ಹಿರಿಯ:** ಬರುತ್ತಾನೋ ಇಲ್ಲವೋ ಅನ್ನೋದೇ ಗೊತ್ತಾಗಿಲ್ಲ.

**ಭಿಕ್ಷುಕ:** ಸ್ವಾಮಿ, ಮೂರು ದಿವಸದಿಂದ ನೀರೂ ಕುಡಿದಿಲ್ಲ ಸಹಾಯ ಮಾಡಿ.

**ಕುಡುಕ:** ಅದಕ್ಕೆ ಬರಗಾಲ ಬಂದುಬಿಟ್ಟಿದೆ. ಕುಡಿಯೋಕೆ ಎಲ್ಲೂ ನೀರು ಸಿಗ್ತಿಲ್ಲ.

**ಭಿಕ್ಷುಕ:** ನೀರು ಸಿಗದಿದ್ದರೇನಂತೆ ಒಂದು ಬಿಯರ್ ಆದ್ರೂ ಕೊಡ್ಸಿ ಪುಣ್ಯ ಕಟ್ಕೊಳ್ಳಿ ದೊರೆ.

ಸಂಗ್ರಹ: ಸದ್ಯೋಜಾತ, ಅಸಗೋಡು